# ಗಾಂಧೀಜಿ ರೀಚಾರ್ಜ್

**ನಾಗೇಶ ಹೆಗಡೆ**

ಕಲೆ: ಬಿ.ಜಿ. ಗುಜ್ಜಾರಪ್ಪ

**ನೀರು** ಸುರಿಯುವ ಸದ್ದು , ಜಳಕ ಮಾಡುವ ಸದ್ದು...

ಗಂಗೇಚ ಯಮುನೇಚೈವ ಗೋದಾವರಿ ಸರಸ್ವತೀ
ನರ್ಮದೇ ಸಿಂಧು ಕಾವೇರೀ ಜಲೇಸ್ಮಿನ್ ಸನ್ನಿಧಿಂ ಕುರು

ಮಗುವಿನ ಧ್ವನಿ: ಏನಪ್ಪಾ ಹಾಗಂದ್ರೆ?

ಗಂಡಸಿನ ಧ್ವನಿ: ಅದರ ಅರ್ಥ, 'ಯಾವುದೇ ನೀರಿನಲ್ಲಿ ಸ್ನಾನ ಮಾಡಿದರೂ ಈ ಏಳು ಪವಿತ್ರ ನದಿಗಳ ಸದ್ಗುಣಗಳೇ ಈ ನೀರಿಗೆ ಬರಲಿ' ಅಂತ.

ಮಗು: ಮತ್ತೆ ಗಂಗೆ, ಯಮುನೆ, ಗೋದಾವರಿ, ನಮ್ಮ ಕಾವೇರಿ ಎಲ್ಲ ನದಿಗಳೂ ಅಷ್ಟೆಲ್ಲ ಕೊಳಕಾಗಿವೆ ಅಂತಾರೆ! ಸಿಂಧೂ ನದಿಯಲ್ಲಂತೂ ಡಾಲ್ಫಿನ್‌ಗಳೂ ಸತ್ತು ಹೋಗಿದಾವಂತೆ. ಗಂಗಾ ನದೀಲಂತೂ ಕೋವಿಡ್ ರೋಗಿಗಳ ಎಷ್ಟೊಂದು ಹೆಣಗಳನ್ನು ನೋಡಿದೀವಿ ಟೀವೀಲಿ! ನಾವು ಸ್ನಾನ ಮಾಡ್ತಾ ಇರೋ ಈ ಬೋರ್ವೆಲ್ ನೀರಲ್ಲಿ ಆ ನದಿಗಳ ಕೊಳಕೆಲ್ಲ ಬರಲಿ ಅಂತಾನಾ? ನಾ ಹೇಳಲ್ಲಪ್ಪ ಈ ಮಂತ್ರಾನ... (ಚೊಂಬು ಬಿದ್ದ ಸದ್ದು, ನೀರಿನ ಹಿನ್ನೆಲೆ ಸಂಗೀತ ನಿಂತ ಸದ್ದು)

★★★

ಅವನು: ಅಬ್ಬ! ಈಗಿನ ಮಕ್ಕಳಿಗೂ ಗೊತ್ತಾಗ್ತಾ ಇದೆ – ಜಲಮಾಲಿನ್ಯ ಅಂದರೆ ಏನು, ನಮ್ಮ ನದಿಗಳು ಎಷ್ಟೊಂದು ಕೊಳಕು ಧಾರೆಯನ್ನು ಹರಿಸ್ತಾ ಇವೆ ಅನ್ನೋದು. ಆದರೆ, ನಾವು ದೊಡ್ಡೋರು ಅದೇನ್ ಮಾಡ್ತಾ ಇದೀವಿ ನೋಡಿ. ಕಳೆದ ಐವತ್ತು ವರ್ಷಗಳಲ್ಲಿ ನಮ್ಮ ಕಾರ್ಖಾನೆಗಳು, ಮುನಿಸಿಪಾಲಿಟಿಗಳು, ಜನಸಾಮಾನ್ಯರು ಯಾರೂ ಇದರ ಬಗ್ಗೆ ಚಿಂತನೆಯನ್ನೇ ಮಾಡಿರಲಿಲ್ಲವೆ?

ಅವಳು: ಚಿಂತನೆ ಮಾಡಿಲ್ಲ ಅಂತಲ್ಲ. ಎಲ್ಲರಿಗಿಂತ ಮೊದಲು ಗಂಗಾ ನದಿಯ ಜಲಮಾಲಿನ್ಯದ ಬಗ್ಗೆ ಎಚ್ಚರಿಕೆ ಕೊಟ್ಟವರು ಯಾರು ಗೊತ್ತಾ? ಬಾಪೂಜಿ! ನೂರು ವರ್ಷದ ಹಿಂದೆನೇ ಅವರು ಅದರ ಬಗ್ಗೆ ಬರೆದಿದ್ರು...